

ಉತ್ಸವವೊಂದರ ಸಂದರ್ಭದಲ್ಲಿ ಸಾರ್ವಜನಿಕ ದರ್ಶನ ನೀಡುತ್ತಿರುವ ಜೀವಂತ 'ದೇವಿ'

# ದೇವಿಯರ ಲೋಕದಲ್ಲಿ...

**ನೇಪಾಳದಲ್ಲಿ ಭಕ್ತರನ್ನು ಅನುಗ್ರಹಿಸುವ ಮಾನವ ರೂಪದ 'ದೇವಿ'ಯ ಸುತ್ತ ರಂಗುರಂಗಿನ ಕಥೆಗಳಿವೆ. 'ದೇವಿ' ಆಗಿದ್ದಾಗ ಪೂಜೆಗೊಳ್ಳುವ ಹಾಗೂ ಪ್ರೌಢಾವಸ್ಥೆಗೆ ಬಂದಾಗ ಪಟ್ಟ ಕಳೆದುಕೊಳ್ಳುವ ಆ ಹೆಣ್ಣುಮಕ್ಕಳ ಬದುಕು ಒಮ್ಮೆಗೇ ವಿವರ್ಣಗೊಳ್ಳುತ್ತದೆ.**

■ ಶ್ರೀನಿವಾಸ ಜೋಕಟ್ಟೆ

ನೇಪಾಳದ ರಾಜಧಾನಿ ಕಾಠ್ಮಂಡುವಿನ ಕಾಷ್ಠಮಂಡಪ್ ಪಕ್ಕದಲ್ಲಿ ಕೆಂಪು ಕಲ್ಲುಗಳ ಮಹಲ್ ಇದೆ. ನಾವೆಲ್ಲ ಆ ಹೊತ್ತು ಕೆಳಗೆ ನಿಂತು ಮಹಲಿನ ಮೇಲ್ಗಡೆಯ ಕಿಟಕಿಯತ್ತಲೇ ನೋಡುತ್ತಿದ್ದೆವು. ಸ್ವಲ್ಪ ಹೊತ್ತಿನಲ್ಲಿ ದೇವಿಯಂತೆ ಶೃಂಗಾರಗೊಂಡ ಪುಟ್ಟ ಬಾಲಕಿಯೊಬ್ಬಳು ಕಿಟಕಿಯ ಹಿಂದೆ ಪ್ರತ್ಯಕ್ಷಳಾಗಿ, ಕೆಳಗೆ ನಿಂತಿದ್ದ ಭಕ್ತಜನರಿಗೆ ದರ್ಶನ ಕೊಟ್ಟೇ ಬಿಟ್ಟಳು. ಕೈ ಎತ್ತಿ ಎಲ್ಲರಿಗೂ ಆಶೀರ್ವದಿಸಿದಳು. ಎಲ್ಲರನ್ನೂ ಸ್ವಲ್ಪ ಹೊತ್ತು ವೀಕ್ಷಿಸಿ ಮತ್ತೆ ಒಳಹೋದಳು. ಆಕೆಯೇ 'ಕುಮಾರಿ ದೇವಿ'. ಈ ಕಟ್ಟಡವೇ 'ಕುಮಾರಿ ಘರ್'.

'ಕುಮಾರಿ ದೇವಿ' ಆ ಕಟ್ಟಡದ ಒಳಗಡೆಯೇ ಇರುತ್ತಾಳೆ. ಮೂರು ವರ್ಷ ಪ್ರಾಯದಲ್ಲಿ ಒಂದು ದಿನ ಆಕೆಗೆ ಕೆಂಪು ಜರಿಯ ಬಟ್ಟೆಯನ್ನು ತೊಡಿಸಿ, ತಲೆಗೂದಲು ಒಂದಿಷ್ಟು ಕತ್ತರಿಸಿ, ಹಣೆಗೆ ಕುಂಕುಮದಿಂದ ಮೂರನೇ ಕಣ್ಣು ಚಿತ್ರಿಸಿ, ತಲೆಗೆ ಕಿರೀಟವಿಟ್ಟು 'ಕುಮಾರಿ' ದೇವಿಯನ್ನಾಗಿಸಿ ಆ ಕಟ್ಟಡಕ್ಕೆ ಕರೆತಂದು ಕೂರಿಸಿದ್ದಾರೆ. ಆ ದಿನದಿಂದ ಆಕೆ ದೇವಿ. ಆಕೆಯ ಆಶೀರ್ವಾದ ಪಡೆಯಲು ಭಕ್ತರು ಮುಗಿಬೀಳುತ್ತಾರೆ. ಸಾಮಾನ್ಯ ಬಾಲಕಿಯೊಬ್ಬಳು 'ದೇವಿ'ಯಾಗಿ ರೂಪಾಂತರಗೊಂಡು 'ಕುಮಾರಿ ಘರ್'ನಲ್ಲಿ ಭಕ್ತರಿಗೆ ಆಶೀರ್ವಾದ ನೀಡತೊಡಗುತ್ತಾಳೆ.

ಕಾಠ್ಮಂಡುವಿನಲ್ಲಿ ಹನುಮಾನ್ ಡೋಕಾ ದರ್ಬಾರ್ ಚೌಕ್ ಪ್ರವೇಶಿಸುವಾಗ ಎಡಕ್ಕೆ 'ಕುಮಾರಿ ಘರ್' ಸಿಗುತ್ತದೆ. ಇಲ್ಲಿನ 'ಕುಮಾರಿ' ದೇವಿಗೂ ಕನ್ನಡದ ತುಳಜಾ ಭವಾನಿಗೂ ಸಂಬಂಧವಿದೆ ಎನ್ನಲಾಗುತ್ತದೆ. ನೇಪಾಳದ ಬಾಲಕಿ 'ಕುಮಾರಿ ದೇವಿ' ಋತುಮತಿ ಆಗುವ ತನಕ ಪೂಜೆಗೆ ಅರ್ಹಳು. 'ಕುಮಾರಿ'ಯು ಪ್ರಥಮ ಬಾರಿಗೆ ರಜಸ್ವಲೆ ಆದಾಗ ಆಕೆಯ ದೇಹದಿಂದ ದೇವಿ ಹೊರಟು ಹೋಗುತ್ತಾಳೆಂದು ನಂಬಿಕೆ. ಹನ್ನೊಂದು ಹನ್ನೆರಡನೇ ವಯಸ್ಸಿನ ನಂತರ ಆಕೆ ಪೀಠದಿಂದ ಹೊರಬರುತ್ತಾಳೆ. ಆ ಜಾಗಕ್ಕೆ ಮತ್ತೊಬ್ಬ ಬಾಲಕಿಯನ್ನು ಆಯ್ಕೆ ಮಾಡುತ್ತಾರೆ. ಈ ಪರಂಪರೆ ಮುಂದುವರಿಯುತ್ತಾ ಬಂದಿದೆ.



ಇಂದ್ರ ಜಾತ್ರಾ ಉತ್ಸವದ ಸಂದರ್ಭದಲ್ಲಿ ಭಕ್ತರ ನಡುವಿನ ರಥದಲ್ಲಿ ಕುಮಾರಿ ದೇವಿ